# ಸಂಗೀತದಲ್ಲಿ ಅವಧಾನ ಪಲ್ಲವಿ



ಮೈಸೂರಿನ ವಿದ್ವಾನ್ ನಂದಕುಮಾರ್ ಅವರಿಂದ ಸಂಗೀತ ಪ್ರಾತ್ಯಕ್ಷಿಕೆ ಚಿತ್ರ: ಚಂದ್ರಹಾಸ ಕೋಟೆಕಾ

**ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ 'ಅವಧಾನ ಪಲ್ಲವಿ' ಒಂದು ವಿಶಿಷ್ಟ ಕಲಾ ಪ್ರಕಾರ. ಅವಧಾನಗಳಲ್ಲಿ ಹಾಡಲು ಸಂಗೀತ ಕಲಾವಿದನಿಗೆ ಬಹಳ ಪಾಂಡಿತ್ಯ, ಚಾಕಚಕ್ಯತೆ, ರಾಗ– ತಾಳ– ಭಾವ– ಲಯಗಳಲ್ಲಿ ಸಂಪೂರ್ಣ ಹಿಡಿತ ಇರಬೇಕು. ತಾಳಾವಧಾನ ಪಲ್ಲವಿ ಹಾಡುಗಾರಿಕೆ ಈಗ ಅಪರೂಪವಾಗಿದ್ದು, ನಾಡಿನಲ್ಲಿ ಬೆರಳೆಣಿಕೆಯ ಕಲಾವಿದರಷ್ಟೇ ಈ ಪ್ರಕಾರವನ್ನು ಹಾಡುತ್ತಾರೆ.**

■ **ಉಮಾ ಅನಂತ್**

ಕರ್ನಾಟಕ ಸಂಗೀತದಲ್ಲಿ ವರ್ಣ, ಕೃತಿ ಕೀರ್ತನೆ, ಜತಿಸ್ವರ, ತಿಲ್ಲಾನಗಳನ್ನು ಎಲ್ಲ ಸಂಗೀತಗಾರರೂ ಹಾಡುತ್ತಾರೆ. ಆದರೆ 'ಪಲ್ಲವಿ' ಹಾಡುವ ಕಲಾವಿದರು ಬಹಳ ಅಪರೂಪ. ಕ್ಲಿಷ್ಟಕರವಾದ ತಾಳ–ಲಯ ವಿನ್ಯಾಸಗಳಿಂದ ಕೂಡಿದ ಈ ಕಲಾ ಪ್ರಕಾರ ಹಾಡಲು ಅಪಾರ ಪರಿಶ್ರಮ, ತಾಳವನ್ನು ಸಮತೋಲನ ಮಾಡಿ ಹಾಡುವ ಸೃಜನಶೀಲತೆ ಬೇಕು.

ಕರ್ನಾಟಕ ಸಂಗೀತದ ಅವಧಾನ ಪಲ್ಲವಿ ಹಾಡುವಾಗ ಎರಡು ಕೈಗಳಲ್ಲಿ ತಾಳಗಳನ್ನು ಏಕಕಾಲದಲ್ಲಿ ಹಾಕಿ ತೋರಿಸಲಾಗುತ್ತದೆ. ಎಡಕೈ ಹಾಗೂ ಬಲ ಕೈಗಳಲ್ಲಿ ತಾಳಗಳನ್ನು ಹಾಕುತ್ತಾ ಹಾಡುವ ವಿಶಿಷ್ಟ ಮತ್ತು 'ಅವಧಾನ ಪಲ್ಲವಿ' ಪ್ರಕಾರದಲ್ಲಿ ಮಾತ್ರವೇ ಈ ರೀತಿಯ ಲಯ ಮಾಧುರ್ಯವನ್ನು ಕಾಣಬಹುದು.

ವಿದುಷಿ ಸುಗುಣಾ ಪುರುಷೋತ್ತಮ್ ಈ ಗಾಯನ ಪ್ರಕಾರದ ಪ್ರತಿಪಾದಕಿ. ಲಯ ಒಂದೇ ಆಗಿದ್ದರೂ ಎರಡು ಕೈಗಳಲ್ಲಿ ತಾಳ ಪ್ರಕ್ರಿಯೆ ಏಕಕಾಲದಲ್ಲಿ ನಡೆಯುತ್ತದೆ. ತಾಳಕ್ಕೂ ಲಯಕ್ಕೂ ಅನನ್ಯ ಸಂಬಂಧವನ್ನು ಬೆಸೆಯುವ ಈ ಶೈಲಿ ಹಾಡುಗಾರಿಕೆ ಬಹಳ ಅಪರೂಪದ್ದು ಮತ್ತು ಇಂಥ ಪ್ರಯೋಗಾತ್ಮಕ ಸಂಗೀತ ಬಹಳ ವಿರಳವೇ ಎನ್ನಬಹುದು. ವಿದುಷಿ ಆರ್.ಎ. ರಮಾಮಣಿ ಅವರೂ ಕೂಡ ಅವಧಾನ ಪಲ್ಲವಿ ಹಾಡುವ ಅಪರೂಪದ ಗಾಯಕಿ.

ಲಯ ವಿನ್ಯಾಸ ಎನ್ನುವುದು 'ಪಲ್ಲವಿ'ಯ ಅವಿಭಾಜ್ಯ ಅಂಗ. ಆಳವಾದ ಸಂಗೀತ ಅಧ್ಯಯನ, ಅಭ್ಯಾಸದ ಮೂಲಕ ಮಾತ್ರ ಇದನ್ನು ಸಿದ್ಧಿಸಬಹುದು. ವಿದ್ವಾನ್ ಪಲ್ಲವಿ ಚಂದ್ರಪ್ಪ ಅಂಥ ಸಾಧನೆ ಮಾಡಿದ ಕಲಾವಿದರಾಗಿದ್ದರು.



ವಿದ್ವಾನ್ ಪಲ್ಲವಿ ಚಂದ್ರಪ್ಪ ಅವರಿಂದ ಅವಧಾನ ಪಲ್ಲವಿ ಹಾಡುಗಾರಿಕೆ

ಹಾಗೆ ನೋಡಿದರೆ ಅವಧಾನ ಪಲ್ಲವಿ 16ನೇ ಶತಮಾನದಲ್ಲಿಯೇ ಬಳಕೆಯಲ್ಲಿತ್ತು. ಹೆಚ್ಚು ಪ್ರಚಲಿತದಲ್ಲೂ ಇತ್ತು. ಆದರೆ ಇಂದು ಪಲ್ಲವಿ ಹಾಡುವವರ ಸಂಖ್ಯೆ ಬಹಳ ಕಡಿಮೆ. ಚಂದ್ರಪ್ಪ ಅವರು ಅಪರೂಪದ ರಾಗಗಳಲ್ಲಿ ಹರಿದಾಸರ ಕೀರ್ತನೆ, ದೇವರನಾಮ, ವಚನಗಳನ್ನು ಹಾಡುತ್ತಿದ್ದರು. ಸ್ವರ ಸಂಯೋಜನೆ, ತಾಳಗಳ ನಿಭಾವಣೆ ಅವರದೇ ಆಗಿತ್ತು. ಹೀಗಾಗಿ ಕರ್ನಾಟಕ ಸಂಗೀತ ಚರಿತ್ರೆಯಲ್ಲಿ ಚಂದ್ರಪ್ಪ ಅವರದು ಮಹತ್ವದ ಹೆಸರು.

## ಪಲ್ಲವಿಯಲ್ಲಿ ಹಲವು ವಿಧ

'ಪಲ್ಲವಿ'ಯಲ್ಲಿ ಅಷ್ಟೋತ್ತರ ತಾಳ ಪಲ್ಲವಿ, ರೇಟ್ಟಾಯ ಪಲ್ಲವಿ, ತಾಳಮಾಲಿಕಾ ಪಲ್ಲವಿ, ತಾನಂ ಪಲ್ಲವಿ, ದ್ವಿಗತಿ ಪಲ್ಲವಿ, ತಾಳಾವಧಾನ ಪಲ್ಲವಿ.. ಹೀಗೆ ಅನೇಕ ಪ್ರಕಾರಗಳಿವೆ. ಜತೆಗೆ ವೈವಿಧ್ಯಮಯ 'ತಾನ'ಗಳಿವೆ. ಕುಕ್ಕುಟಾದಿ ತಾನ, ಮಂಡೂಕಾದಿ ತಾನ, ಅಶ್ವ ತಾನ.. ಹೀಗೆ.

ಕುಕ್ಕುಟಾದಿ ತಾನಗಳಲ್ಲಿ ಪಕ್ಷಿಗಳ ಚಿಲಿಪಿಲಿ ಇಂಚರವಿದ್ದರೆ, ಮಂಡೂಕಾದಿ ತಾನಗಳಲ್ಲಿ ಕಪ್ಪೆಗಳು ವಟಗುಟ್ಟುತ್ತವೆ. ಅಶ್ವ ತಾನಗಳಲ್ಲಿ ಕುದುರೆಯ ನಡೆ.. ಅದೂ ತಕ ತಕಿಟ.. ತಕ ತಕಿಟ.. ಹೀಗೆ ನೃತ್ಯದಲ್ಲಿ ಬಳಸುವ 'ನಡೆ'ಯಂತಿದ್ದು ಕೇಳಲು ಆಪ್ಯಾಯಮಾನವಾಗಿರುತ್ತದೆ.

ಅವಧಾನದಲ್ಲಿ ಏಕಕಾಲಕ್ಕೆ ಹಲವು ತಾಳಗಳನ್ನು ನಿರ್ವಹಿಸಬೇಕಾಗುತ್ತದೆ. ಇದಕ್ಕೆ ಸಂಗೀತದ ರಾಗ, ಭಾವ, ತಾಳ, ಲಯ ಜ್ಞಾನ ಆಳವಾಗಿರಬೇಕು. ಕ್ಲಿಷ್ಟಕರ ತಾಳಗಳನ್ನು ಎರಡು ಕೈಗಳಲ್ಲಿ ಬ್ಯಾಲೆನ್ಸ್ ಮಾಡುವ ಚಾಕಚಕ್ಯತೆ ಬೇಕು. ಅವಧಾನ ಪಲ್ಲವಿಯಯ ಅರ್ಧಭಾಗ ಒಂದು 'ನಡೆ'ಯಲ್ಲಿದ್ದರೆ ಇನ್ನೊಂದು ಅರ್ಧ ಭಾಗ ಮತ್ತೊಂದು 'ನಡೆ'ಯಲ್ಲಿರುತ್ತದೆ.

ತಾಳಾವಧಾನದಲ್ಲಿ ತಾಳಕ್ಕೇ ಪ್ರಾಧಾನ್ಯ ಕೊಟ್ಟರೆ ರಾಗ ಮಾಧುರ್ಯಕ್ಕೆ ಧಕ್ಕೆಯಾಗದೇ ಎಂಬುದು ಪ್ರಶ್ನೆ. ಒಬ್ಬ ವಿದ್ವತ್‌ಪೂರ್ಣ ಕಲಾವಿದ ರಾಗ–ತಾಳ ಎರಡನ್ನೂ ಸುಲಲಿತವಾಗಿ ಪ್ರಸ್ತುತಪಡಿಸುವ ನೈಪುಣ್ಯ ಹೊಂದಿರುತ್ತಾನೆ. ಕಲಾವಿದನ ಸಾಮರ್ಥ್ಯವನ್ನು ಒರೆಗೆ ಹಚ್ಚುವುದು ಇಲ್ಲೇ. ರಾಗ–ತಾಳ– ಭಾವ–ಲಯ– ನಡೆ– ಸ್ಥಾಯಿ... ಎಲ್ಲವೂ ಒಂದರೊಳಗೊಂದಾಗಿ ಮೂಡಿಬಂದರೆ ಆ ಕಲಾವಿದ ಕೇಳುಗರ ಮನ ಗೆದ್ದಂತೆಯೇ.

ಅವಧಾನ ಪಲ್ಲವಿ ಒಂದು ವಿಶಿಷ್ಟ ಕಲೆ. ಇದು ಕರ್ನಾಟಕ ಸಂಗೀತದಲ್ಲಿ ಈಗ ನಶಿಸಿ ಹೋಗುತ್ತಿದೆ. ಪಲ್ಲವಿ ಚಂದ್ರಪ್ಪ ಅವರು ಈ ಕಲೆಯನ್ನು ಜತನವಾಗಿ ಕಾಪಿಟ್ಟುಕೊಂಡು ಬಂದಿದ್ದಲ್ಲದೆ ಅನೇಕ ಪ್ರತಿಭಾವಂತ ಶಿಷ್ಯವೃಂದವನ್ನೂ ಸೃಷ್ಟಿಸಿದ್ದರು. ಮೈಸೂರಿನ ವಿದ್ವಾನ್ ನಂದಕುಮಾರ್ ಅವಧಾನ ಪಲ್ಲವಿ